

ಅಂಗಡಿ–ಮಳಿಗೆಗಳ ಯಹೂದಿ ಬೀದಿ

ಕರೆದೊಯ್ಯುತ್ತದೆ. ನೆಲದತ್ತ ಜಾರಿದ ಛಾವಣಿಯ ಮನೆಗಳು, ಹಸಿರು, ಕೆಂಪು, ಹಳದಿ ಮತ್ತು ನೀಲಿಯ ಗಾಢ ಬಣ್ಣಗಳಲ್ಲಿ ಮುಳುಗೆದ್ದ ಗೋಡೆಗಳು, ಮೇಲ್ಭಾಗದಲ್ಲಿ ಆಲಂಕಾರಿಕ ಕಿಟಕಿ, ಜಾಲಂದ್ರಗಳು ಕಣ್ಮನ ಸೆಳೆಯುತ್ತವೆ. 'ಜ್ಯೂ ಸ್ಟ್ರೀಟ್' ಕಿರಿದಾದ ಕಾರಣ, ದ್ವಿಚಕ್ರ ವಾಹನಗಳಿಗಷ್ಟೇ ಪ್ರವೇಶ. ನಡೆಯುತ್ತ ಸುತ್ತಾಡುವ ಅನುಭವ ಬಲು ಸೊಗಸು.

'ಜ್ಯೂ ಟೌನ್'ನಲ್ಲಿ ಏನಿದೆ, ಏನಿಲ್ಲ? ಪ್ರವಾಸಿಗರನ್ನು ಸೆಳೆಯುವ ಮಾಯಾಲೋಕ ಅದು! ಆಭರಣಗಳು, ಪಾತ್ರೆಗಳು, ಸ್ತಂಭ, ಕಟ್ಟಿಗೆ ಮತ್ತು ಲೋಹದ ಕಲಾಕೃತಿಗಳು, ಮೂರ್ತಿಗಳು, ಪೀಠೋಪಕರಣ, ಕರಕುಶಲ ಕಲೆ, ಲೋಹದ ಗಜಸಾಲು ಪ್ರತಿಕೃತಿ, ಆಳೆತ್ತರದ ಕನ್ನಡಿ, ಪೇಂಟಿಂಗ್, ದೀಪಗಳು, ದ್ವಾರ ಚೌಕಟ್ಟು, ಅಪರೂಪದ ಛಾಯಾಚಿತ್ರ, ಗಾಜು ಮತ್ತು ಪೋರ್ಸಲೀನ್ ಕಲಾಕೃತಿಗಳು ಕಣ್ಮನ ಸೆಳೆಯುತ್ತವೆ. ಯಹೂದಿಯರ ಸಂಸ್ಕೃತಿ, ವೇಷಭೂಷಣ, ಮನೆ–ಕಟ್ಟಡಗಳ ಚಹರೆ, ಕಲಾಕೃತಿ, ಸ್ಮರಣಿಕೆ, ಚಿತ್ರ ಪ್ರದರ್ಶನ, ಆಹಾರ, ತಿಂಡಿ ತಿನಿಸು ಇತ್ಯಾದಿಗಳು ಮೇಳೈಸಿರುವ 'ಜ್ಯೂ ಸ್ಟ್ರೀಟ್' ಬಹು ವರ್ಣರಂಜಿತ. ಒಂದೊಂದು ಕಟ್ಟಡ ಅಥವಾ ಮನೆಯ ಹಿಂದೆ ನೂರಾರು ವರ್ಷಗಳ ಇತಿಹಾಸ ಇದೆ.

ಇದಲ್ಲದೆ ಸೋಪು, ಶಾಂಪೂ, ಆಟಿಕೆ, ಎಂಬ್ರಾಯಿಡರಿ, ವರ್ಣರಂಜಿತ ಉಡುಪು, ಸುಗಂಧ ದ್ರವ್ಯಗಳನ್ನು ಗ್ರಾಹಕರಿಗೆ ಬಿಕರಿ ಮಾಡುವ ಹತ್ತಾರು ಅಂಗಡಿಗಳು ಇಲ್ಲಿವೆ. ಕಾಫಿ ಪರಿಮಳ ಆಘ್ರಾಣಿಸುತ್ತ ರೆಸ್ಟೋರೆಂಟಿಗೆ ಹೋದರೆ, ದರ ಕೇಳಿ ಗಾಬರಿಯಾಗುತ್ತೀರಿ; ಹಾಗೆಯೇ ಹಳೆಯ ಛಾಯಾಚಿತ್ರಗಳ ಪ್ರದರ್ಶನ ನೋಡುತ್ತ ಹೋದರೆ ದಿಢೀರೆಂದು ನೂರಿನ್ನೂರು ವರ್ಷ ಹಿಂದಿನ ಲೋಕಕ್ಕೆ ಜಾರುತ್ತೀರಿ!

## ಪರದೇಸಿ 'ಸಿನೆಗಾಗ್'

ನೂರಾರು ವರ್ಷಗಳಿಂದ ಕೊಚಿನ್‌ನ ಕಡಲಿನ ತೀರದಲ್ಲಿ ಯಹೂದಿಗಳು ವ್ಯಾಪಾರ–ವಹಿವಾಟು ನಡೆಸಿಕೊಂಡು ನೆಲೆಸಿದ್ದರು. ಮಲೆಯಾಳಿ ಸಮುದಾಯದ ಜತೆ ಸೌಹಾರ್ದದ ಬದುಕು ಅವರದಾಗಿತ್ತು. 1948ರಲ್ಲಿ ಇಸ್ರೇಲ್ ಸ್ಥಾಪನೆಯಾದಾಗ, ಬಹುತೇಕರು ಅಲ್ಲಿಗೆ ತೆರಳಿದರು. ತಮ್ಮ ಆಸ್ತಿಪಾಸ್ತಿ ಇಲ್ಲೇ ಬಿಟ್ಟು ತೆರಳಿದವರು ಹಲವರು. ಒಂದಷ್ಟು ಯಹೂದಿಯರು ತಮ್ಮ ಸಂಪತ್ತು ಹಾಗೂ ಮನೆ–ಕಟ್ಟಡಗಳನ್ನು ಸ್ಥಳೀಯರಿಗೆ ಒಪ್ಪಿಸಿ ಹೋದರೆ, ಮತ್ತೊಂದಷ್ಟು ಸ್ಥಳೀಯರು ಯಹೂದಿಗಳ ಆಸ್ತಿ ವ್ಯಾಪಿಸಿಕೊಂಡರು. ಅಲ್ಲಿಗೆ ಹೋಗಬಯಸದವರು ಇಲ್ಲೇ ಉಳಿದುಕೊಂಡರು. ಇಪ್ಪತ್ತು ವರ್ಷಗಳ ಹಿಂದಿನವರೆಗೂ ಇಲ್ಲಿ 2000 ಯಹೂದಿಗಳು ಇದ್ದರಂತೆ.

ಸಮುದಾಯವೊಂದು ದೊಡ್ಡ ಪ್ರಮಾಣದಲ್ಲಿ ವಾಸಿಸುತ್ತಿದ್ದರೆ, ಅವರಿಗೆ ಪ್ರಾರ್ಥನಾ ಮಂದಿರವೊಂದು ಇರಲೇಬೇಕಲ್ಲ? ಕೊಚಿನ್‌ನಲ್ಲಿರುವ ಯಹೂದಿಗಳ ಪ್ರಾರ್ಥನಾ ಮಂದಿರ ತನ್ನ ಸಮೃದ್ಧ ಇತಿಹಾಸ ಹಾಗೂ ವಾಸ್ತುಶೈಲಿಯಿಂದ ದೇಶ ವಿದೇಶಗಳ ಪ್ರವಾಸಿಗರನ್ನು ಸೆಳೆಯುತ್ತಿದೆ.

'ಸಿನೆಗಾಗ್' ಎಂದರೆ ಯಹೂದಿಯರ ಪ್ರಾರ್ಥನಾಲಯ. ದೂರದ ನಾಡಿನಿಂದ ಬಂದ ಯಹೂದಿಯರು ತಮ್ಮ ಪ್ರಾರ್ಥನೆಗೆಂದು ಕಟ್ಟಿಸಿಕೊಂಡ ಮಂದಿರವು 'ಪರದೇಸಿ ಸಿನೆಗಾಗ್' ಎಂದೇ ಹೆಸರುವಾಸಿಯಾಗಿದೆ. ಯೂರೋಪ್ ದೇಶಗಳಲ್ಲಿ ಸೆರೆವಾಸವನ್ನು ತಪ್ಪಿಸಿಕೊಳ್ಳಲು ಕೊಚಿನ್‌ಗೆ ಬಂದ ಯಹೂದಿ ಸಮುದಾಯದವರಿಗೆ ಪ್ರಾರ್ಥನೆ ಸಲ್ಲಿಸಲು ಅನುವಾಗುವಂತೆ 1568ರಲ್ಲಿ ಇದನ್ನು ನಿರ್ಮಿಸಲಾಯಿತು. 1662ರಲ್ಲಿ ಪೋರ್ಚುಗೀಸರು ಇದನ್ನು ಭಾಗಶಃ ನಾಶಪಡಿಸಿದರು. ನಂತರ ಎರಡು ವರ್ಷಗಳ ಬಳಿಕ ಡಚ್ಚರು ಪುನರ್ ನಿರ್ಮಿಸಿದರು. ಕ್ರಿ.ಶ. 1760ರಲ್ಲಿ ಪ್ರಾರ್ಥನಾ ಮಂದಿರವನ್ನು ನವೀಕರಿಸಲಾಯಿತು.

ಸಿನೆಗಾಗ್‌ನ ಬಲಿಷ್ಠ ಗೋಡೆಯನ್ನು ಸುಣ್ಣ ಹಾಗೂ ಲ್ಯಾಟರೈಟ್ ಕಲ್ಲು ಬಳಸಿ ಕಟ್ಟಲಾಗಿದೆ. ಇಳಿಜಾರು ಛಾವಣಿಯು ಪ್ರಬಲ ಮುಂಗಾರು ಮಳೆಯಿಂದ ಮಂದಿರವನ್ನು ರಕ್ಷಿಸುತ್ತದೆ. ಪ್ರವೇಶದ್ವಾರ ಪೂರ್ವ ದಿಕ್ಕಿಗಿದ್ದು, ಜೆರುಸಲೇಮ್ ಕಡೆ ಮುಖ ಮಾಡಿದೆ. ಒಳಗೆ ಬರುತ್ತಲೇ ಎತ್ತರದ ಎರಡು ಹಿತ್ತಾಳೆ ಸ್ತಂಭಗಳು ಸ್ವಾಗತಿಸುತ್ತವೆ. ಅದನ್ನು ದಾಟಿದರೆ, ಪ್ರಾರ್ಥನಾ ಸಭಾಂಗಣ ಎದುರಾಗುತ್ತದೆ. ಇದಕ್ಕೆ 'ಬಿಮಾಹ್' ಎನ್ನುತ್ತಾರೆ. ಸಾಮಾನ್ಯವಾಗಿ ಸಂಜೆ ಹೊತ್ತು ಇಲ್ಲಿ ಪ್ರಾರ್ಥನೆ ನಡೆಯುತ್ತದೆ. ಬೆಲ್ಜಿಯಂನಿಂದ ತರಿಸಿ,

ಪ್ರಾಚೀನ ಕಾಲದ ಸಾಮಗ್ರಿಗಳ ಮಳಿಗೆಯಲ್ಲಿ ಅಚ್ಚರಿ ಮೂಡಿಸುವ ಬೃಹದಾಕಾರದ ಪಾತ್ರೆ

